ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 20–10–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ<br>ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪೊಲೀಸ್ ಸಂಸ್ಮರಣಾ ದಿನಾಚರಣೆ:<br>ಮುಖ್ಯ ಅತಿಥಿಗಳು:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ.<br>ಅಧ್ಯಕ್ಷತೆ:<br>ಶ್ರೀ ಕೆ.ಜೆ. ಜಾರ್ಜ್,<br>ಗೃಹ ಸಚಿವರು | 21–10–2014<br>ಮಂಗಳವಾರ<br>ಬೆಳಿಗ್ಗೆ<br>8–00<br>ಗಂಟೆಗೆ | ನಗರ ಸಶಸ್ತ್ರ ಮೀಸಲು ಪಡೆ ಕೇಂದ್ರಸ್ಥಾನ , ಹುತಾತ್ಮರ ಉದ್ಯಾನವನ, ಮೈಸೂರು ರಸ್ತೆ, ಬೆಂಗಳೂರು. |
| 2. | ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ವೆಬ್‌ಸೈಟ್ ಅನಾವರಣ ಸಮಾರಂಭ.<br>ವೆಬ್‌ಸೈಟ್ ಉದ್ಘಾಟನೆ:<br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು<br>ಅಧ್ಯಕ್ಷತೆ:<br>ಶ್ರೀ ಚಿರಂಜೀವಿ ಸಿಂಗ್,<br>ಸಂಸ್ಕೃತಿ ಚಿಂತಕರು. | 21–10–2014<br>ಮಂಗಳವಾರ<br>ಬೆಳಿಗ್ಗೆ<br>11–00<br>ಗಂಟೆಗೆ | ಅಂತರಂಗ ಕಿರುಕೋಣೆ, ಕನ್ನಡ ಭವನ, ಜೆ.ಸಿ. ರಸ್ತೆ. ಬೆಂಗಳೂರು. |

| 3. | ಪತ್ರಿಕಾಗೋಷ್ಠಿ:<br><br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. | 21–10–2014<br>ಮಂಗಳವಾರ<br>ಮಧ್ಯಾಹ್ನ<br>01–00<br>ಗಂಟೆಗೆ | ಕೊಠಡಿ 334,<br>ಸಮ್ಮೇಳನ ಸಭಾಂಗಣ,<br>ಮೂರನೇ ಮಹಡಿ,<br>ವಿಧಾನಸೌಧ,<br>ಬೆಂಗಳೂರು. |
|---|---|---|---|

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಅಕ್ಟೋಬರ್ 21 ರಂದು
## "ಕನಕ" ವೆಬ್‌ಸೈಟ್ ಅನಾವರಣ

**ಬೆಂಗಳೂರು, ಅಕ್ಟೋಬರ್ 20 (ಕರ್ನಾಟಕ ವಾರ್ತೆ)**

ಸಂತಕವಿ ಕನಕದಾಸರ ಸಾಮಾಜಿಕ, ಸಾಂಸ್ಕೃತಿಕ, ಪಾರಮಾರ್ಥಿಕ ಚಿಂತನೆಗಳ ಜೊತೆಗೆ ಅವರ ಕಾವ್ಯಗಳು, ಕೀರ್ತನೆಗಳು ದರ್ಶಿಸಲುಅಪೇಕ್ಷಿಸುತ್ತಿರುವ ದಿಕ್ಕು ಮತ್ತು ಮಾನವೀಯ ಸಂದೇಶಗಳ ಕುರಿತಂತೆ ಹೊಸ ಹೊಸ ಅಧ್ಯಯನಗಳು, ಸಂಶೋಧನೆಗಳು, ಪ್ರಕಟಣೆಗಳು ಹಾಗೂ ಇವುಗಳ ಪ್ರೋತ್ಸಾಹ ಮತ್ತು ಪ್ರಸಾರದ ಉದ್ದೇಶದಿಂದ ಕರ್ನಾಟಕ ಸರ್ಕಾರವು 'ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಹಲವು ಯೋಜನೆಗಳನ್ನು ರೂಪಿಸಿಕೊಂಡಿದೆ.

ಸಂಸ್ಥೆಯು ಮಕ್ಕಳಿಗಾಗಿ 6 ಸಂಪುಟಗಳಲ್ಲಿ ಕನಕಗೊಂಬೆಯಾಟ ಸಿದ್ಧಪಡಿಸುತ್ತಿದೆ. ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ವಿಚಾರ ಸಂಕಿರಣಗಳು ಮತ್ತು ಸಂವಾದಗಳನ್ನು ಆಯೋಜಿಸಲಾಗುತ್ತಿದೆ. ಕನಕದಾಸರ 100 ಕೀರ್ತನೆಗಳನ್ನು ಆಯ್ದು ಕನಕ ಸ್ವರ ಪ್ರಸ್ತಾರದ ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ. ಫೆಲೋಶಿಪ್ ಹಾಗೂ ಸಂಶೋಧನೆಗಳಿಗೆ ಆರ್ಥಿಕ ನೆರವು ಒದಗಿಸಲಾಗುತ್ತಿದೆ. ಕಾಲೇಜಿನ ವಿದ್ಯಾರ್ಥಿಗಳಿಗಾಗಿ 'ಮುತ್ತು ಬಂದಿದೆ ಕೇರಿಗೆ' ಎಂಬ ರಸಗ್ರಹಣ ಶಿಬಿರ ಮತ್ತು ಕನಕ ಸಂಸ್ಕೃತಿ ಕಮ್ಮಟಗಳನ್ನು ನಡೆಸಲಾಗುತ್ತಿದೆ. ಕನಕದಾಸರ ಸಾಹಿತ್ಯ ಕುರಿತಂತೆ ಚಿತ್ರಕಲಾ ಶಿಬಿರವನ್ನು ಏರ್ಪಡಿಸಲಾಗುತ್ತಿದೆ.

ಈ ಎಲ್ಲವುಗಳ ಜೊತೆಗೆ ಸಂಸ್ಥೆಯು ಪ್ರಸಕ್ತ ವರ್ಷದಿಂದ ಕನಕದಾಸರ ಸಮಗ್ರ ಸಾಹಿತ್ಯವನ್ನು ಅಂದರೆ ನಾಲ್ಕು ಕಾವ್ಯಕೃತಿಗಳು ಹಾಗೂ 300ಕ್ಕೂ ಹೆಚ್ಚು ಕೀರ್ತನೆಗಳನ್ನು ಇಂಗ್ಲೀಷ್ ಒಳಗೊಂಡಂತೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ಸಂಸ್ಕೃತ, ಮರಾಠಿ, ಉರ್ದು, ಕೊಂಕಣಿ, ಬ್ಯಾರಿ, ಕೊಡವ, ತುಳು, ಬೆಂಗಾಲಿ, ಪಂಜಾಬಿ, ಅಸ್ಸಾಮಿ ಭಾಷೆಗಳಿಗೆ ಅನುವಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಮಹತ್ವದ ಯೋಜನೆಯಲ್ಲಿನ ಅನುವಾದಕರಿಗೆ ನೆರವಾಗಲಿ ಎನ್ನುವ ಕಾರಣದಿಂದ ಕನಕ ಸಾಹಿತ್ಯ

ಪಾರಿಭಾಷಿಕ ಪದವಿವರಣಾ ಕೋಶ ಹಾಗೂ ಕನಕದಾಸರ ಪೂರ್ಣ ಸಾಹಿತ್ಯವನ್ನು ಹಿರಿಯ ವಿದ್ವಾಂಸರಿಂದ ಸ್ಟುಡಿಯೋದಲ್ಲಿ ವಾಚಿಸಿ ಅದನ್ನು ಧ್ವನಿಮುದ್ರಿಸಿ ಸಿ.ಡಿ. ರೂಪದಲ್ಲಿ ಕೊಡುವ ಕಾರ್ಯಮುಗಿದಿದೆ. ಅನುವಾದ ಯೋಜನೆಯಲ್ಲಿ ನಿಯೋಜಿತ ಒಬ್ಬ ಪ್ರಧಾನ ಸಂಪಾದಕರು, 15 ಭಾಷಾ ಸಂಪಾದಕರು, ಅನುವಾದಕರು ಹಾಗೂ ಅನುವಾದ ಕಾರ್ಯಕ್ಕೆ ನೆರವಾಗಲು 6 ಕನ್ನಡ ವಿದ್ವಾಂಸರ ತಂಡವನ್ನು ಅಣಿಗೊಳಿಸಲಾಗಿದೆ.

ಜೊತೆಗೆ ಕರ್ನಾಟಕದ ತಳಬದುಕಿನ ಸಾಂಸ್ಕೃತಿಕ ಧನಿಗಳಾದ ತತ್ವಪದಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಯೋಜನೆಯನ್ನು ರೂಪಿಸಲಾಗಿದೆ. 27 ಜಿಲ್ಲಾ ಸಂಪಾದಕರನ್ನು ರೂಪಿಸಿ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಗೆ ಇಬ್ಬರಂತೆ ಕ್ಷೇತ್ರ ತಜ್ಞರನ್ನು ನಿಯೋಜಿಸಿ ಸಮಗ್ರವಾಗಿ ಸಂಗ್ರಹಿಸಿ ಪ್ರಕಟಿಸುವ ಈ ಯೋಜನೆಯಡಿ ಸುಮಾರು 50 ಕ್ಕೂ ಹೆಚ್ಚು ಬೃಹತ್ ಸಂಪುಟಗಳು ಹೊರಬರಲಿವೆ.

ಈ ಎಲ್ಲ ಸಿದ್ದತೆಗಳೊಂದಿಗೆ ಕನಕದಾಸರನ್ನು ವಿಶ್ವವ್ಯಾಪಿಯಾಗಿಸಲು ಇಂದು ಅಂತರ್ಜಾಲ ಪ್ರಮುಖ ಸಾಧನವಾಗಿರುವುದರಿಂದ 'ಕನಕ' ವೆಬ್‌ಸೈಟ್‌ವೊಂದನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ರೂಪಿಸಲಾಗಿದೆ. ಈ ವೆಬ್‌ಸೈಟ್‌ನಲ್ಲಿ option ಗಳನ್ನು ಕಲ್ಪಿಸಿದ್ದು, ಅವುಗಳು ಇಂತಿವೆ. ಅಧ್ಯಯನ ಕೇಂದ್ರದ ಆಶಯ ಮತ್ತು ಉದ್ದೇಶಗಳು, ಅಧ್ಯಯನ ಕೇಂದ್ರದ ಉನ್ನತ ಮಂಡಳಿಯಾದ ಕಾರ್ಯಾನುಷ್ಠಾನ, ಮಂಡಳಿಯ ಸ್ವರೂಪ, ಕನಕದಾಸರ ಬದುಕು ಮತ್ತು ಸಾಹಿತ್ಯ ಕುರಿತ ಸಂಕ್ಷಿಪ್ತ ಪರಿಚಯ, ಕನಕದಾಸರು ಸಂದರ್ಶಿಸಿದ ಸ್ಥಳಗಳು, ಈವರೆಗೆ ಚಿತ್ರಿಸಿರುವ ಕನಕದಾಸರ ಭಾವಚಿತ್ರಗಳೂ, ಅಧ್ಯಯನ ಕೇಂದ್ರವು ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು ಮತ್ತು ಮುಂದೆ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು, ಅಧ್ಯಯನ ಕೇಂದ್ರವು ಪ್ರಕಟಿಸಿರುವ ಪುಸ್ತಕಗಳು, ಮುಂದೆ ಪ್ರಕಟಿಸಲಿರುವ ಪುಸ್ತಕಗಳು, ಕನಕದಾಸರ ಸಾಕ್ಷ್ಯಚಿತ್ರ, ಅಧ್ಯಯನ ಕೇಂದ್ರವು ಹೊರತಂದಿರುವ ಕಾವ್ಯವಾಚಿಕೆ, ಕನಕ ಪಾರಿಭಾಷಿಕ ಪದವಿವರಣಾ ಕೋಶ ಮುಂತಾದ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

ವೆಬ್‌ಸೈಟ್‌ನ ವಿಳಾಸ ಮಂಗಳೂರು ವಿಶ್ವವಿದ್ಯಾಲಯ ಕನಕ ಅಧ್ಯಯನ ಕೇಂದ್ರ ವೆಬ್‌ಸೈಟ್‌ಗೆ www.saintpoetkanaka.in ಲಿಂಕ್‌ಅನ್ನು ಒದಗಿಸಲಾಗಿದೆ. ಹೀಗಾಗಿ ಮಂಗಳೂರು ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿರುವ ಕನಕದಾಸರ ಕುರಿತ ಕೃತಿಗಳ ಪಠ್ಯ ಮತ್ತು Bibliography ಮಾಹಿತಿಯು ಲಭ್ಯವಾಗಲಿದೆ.

ಸಮ:ಬಾಬು:ಜಿಪಿಆರ್.

## ಮರು ಕೌನ್ಸಿಲಿಂಗ್

**ಬೆಂಗಳೂರು, ಅಕ್ಟೋಬರ್ 20 (ಕರ್ನಾಟಕ ವಾರ್ತೆ)**

**ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಅರೆಕಾಲಿಕ ಜೆ.ಓ.ಸಿ. ಸಿಬ್ಬಂದಿ ವಿಲೀನಕ್ಕೆ ಸಂಬಂಧಿಸಿದಂತೆ, ಈಗಾಗಲೇ ನೇಮಕಾತಿ ಆದೇಶ ಪಡೆದು**

**ವಿವಿಧ ಕಾರಣಗಳಿಂದ ಈವರೆಗೆ ಕರ್ತವ್ಯಕ್ಕೆ ಹಾಜರಾಗದಿರುವ ಸಿಬ್ಬಂದಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಸಂಬಂಧ ದಿನಾಂಕ 27-10-2014 ರಂದು ಬೆಳಿಗ್ಗೆ 11-00 ಗಂಟೆಯಿಂದ ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು - 560 001 ಇಲ್ಲಿ ಮರು ಕೌನ್ಸಿಲಿಂಗ್ ನಡೆಸಲಾಗುವುದು. ಇದಕ್ಕೆ ಸಂಬಂಧಿಸಿದ ಜೆ.ಓ.ಸಿ. ಅರೆಕಾಲಿಕ ಶಿಕ್ಷಕರುಗಳು ಈ ದಿನಾಂಕದಂದು ಹಾಜರಾಗಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳುವುದು. ಈ ದಿನಾಂಕದಂದು ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳದ ಸಿಬ್ಬಂದಿಗಳಿಗೆ ಪುನ: ಕೌನ್ಸಿಲಿಂಗ್ ನಡೆಸಲಾಗುವುದಿಲ್ಲ ಮತ್ತು ಈ ಸಂಬಂಧ ನಿರ್ದೇಶಕರು ವೃತ್ತಿ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ವೆಬ್‌ಸೈಟ್‌ನಲ್ಲಿ ಜೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.**

ಸಮ:ಬಾಬು:ಜಿಪಿಆರ್.